ಕಾರಿನಲ್ಲಿದ್ದವನೊಡನೆ ಯದ್ವಾತದ್ವಾ ಜಗಳಾಡಿಬಿಟ್ಟಿದ್ದೆ.

★★★

ನನ್ನ ಮೊದಲ ವಿದೇಶ ಪ್ರವಾಸದ ಸಂಪೂರ್ಣ ಕ್ರೆಡಿಟ್ ಮಾತ್ರ ಮೋ– ನಿಗೇ ಸೇರಬೇಕು. ಹೀಗೊಮ್ಮೆ ಬರಿಸ್ತಾದಲ್ಲಿ ಸಿಕ್ಕಾಗ 'ನಿನ್ನನ್ನು ಬ್ಯಾಂಕಾಕ್ ಸುತ್ತಿಸುತ್ತೇನೆ ಬಾ' ಎಂದವ ಮರುದಿನವೇ ಆತನ ಆಫೀಸಿನ ವತಿಯಿಂದ ಅಧಿಕೃತ ಇ–ಮೇಲ್ ಕಳಿಸಿದ. ನಮ್ಮ ಮುಂಬೈ ಪ್ರದರ್ಶನದಲ್ಲಾದ ಭೇಟಿಯ ರೆಫರನ್ಸ್ ನೀಡಿ, ಆತನ ಕಂಪೆನಿ ನನ್ನನ್ನು ಅವರ ಥಾಯ್ಲೆಂಡ್‌ನಲ್ಲಿರುವ ಫ್ಯಾಕ್ಟರಿ ಹಾಗೂ ಶೋ ರೂಮಿನ ವಿಸಿಟ್ಟಿಗೆ ಕರೆದುಕೊಂಡು ಹೋಗಲು ಬಯಸಿದೆ ಎಂಬುದಾಗಿ ತಿಳಿಸಿದ. ಅದರಿಂದ ನಮ್ಮ ಕಂಪೆನಿಗೆ ಆಗಬಹುದಾದ ಲಾಭವನ್ನೂ ಹೇಳಿದ್ದ. ಈ ಪ್ರಯಾಣಕ್ಕೆ ನನ್ನ ಬಾಸಿನ ಅನುಮತಿಯೂ ದೊರೆತು, ವೀಸಾ ಟಿಕೆಟ್ಟುಗಳೆಲ್ಲ ಒಂದರ ಹಿಂದೆ ಒಂದು ಸಿದ್ಧಗೊಂಡು, ನಾನು ಹೊಸ ಬಟ್ಟೆ ವಾಚು ಶೂ ಕೂಲಿಂಗ್ ಗ್ಲಾಸು ಜೊತೆಗೆ ಫಾರ್ಮಲ್ ಕೋಟನ್ನು ಗಡಿಬಿಡಿಯಿಂದ ಖರೀದಿಸಿ, ಕೊನೆಗೆ ಬ್ಯಾಂಕಾಕಿನ ವಿಮಾನವೇರಿದ್ದು... ಎಲ್ಲವೂ ಕನಸಿನಂತೆಯೇ ನಡೆದುಹೋಯಿತು.

**ಇಲ್ಲೊಂದು ಕುತೂಹಲಕಾರಿ ಸಂಗತಿಯಿದೆ. ಕೊಳದಲ್ಲಿ ಆಮೆಯನ್ನು ಬಿಟ್ಟು ಭಕ್ತರು ಅತ್ತ ಹೋಗುತ್ತಿರುವಂತೆ ಅಂಗಡಿಯವರು ಅದೇ ಆಮೆಗಳನ್ನು ಹಿಡಿದು ತಂದು ಮತ್ತೆ ತಮ್ಮ ಬಕೇಟುಗಳಲ್ಲಿ ಇಡುತ್ತಾರೆ. 'ಪಾಪ... ಆಮೆಗಳು, ಇನ್ನೊಬ್ಬ ಶ್ರೀಮಂತ ಹಣ ಕೊಟ್ಟು ಪುಣ್ಯ ಖರೀದಿಸಲು ಬರುವವರೆಗೂ ಕಾಯಬೇಕು' ಎನ್ನುತ್ತ ನಾನು ಮತ್ತು ಮೋ ನಕ್ಕೇ ನಕ್ಕೆವು.**

ಮೂರು ದಿನಗಳ ಬ್ಯಾಂಕಾಕ್ ಸುತ್ತಾಟದಲ್ಲಿ ಮೋ ನನಗೆ ವಿಶ್ವರೂಪ ದರ್ಶನವನ್ನೇ ಮಾಡಿಸಿದ್ದ. ಅದರಲ್ಲಿಯ ಪ್ರಮುಖ ವಿಷಯವೊಂದನ್ನು ಹೇಳಲೇಬೇಕು. ಆದಿನ ರಾತ್ರಿ 'ಬ್ಯಾಂಕಾಕಿನ ಬಗ್ಗೆ ಏನೇನೋ ಕೇಳಿದ್ದೆ, ನನಗೇನೂ ಕಾಣಲೇ ಇಲ್ಲ' ಎಂದು ನಾನು ಕೇಳಿದ್ದಕ್ಕೆ ವದ್ಧಾss... ವದ್ಧಾss... ಎನ್ನುತ್ತಾ 'ಕಳ್ಳ ನೀನು' ಎನ್ನುವ ಮುಖಭಾವ ತೋರಿಸಿ 'ಹಿಯರ್ ವಿ ಗೋ' ಎಂದು ಎಲ್ಲಿಲ್ಲದ ಹುಮ್ಮಸ್ಸಿನಿಂದ ನನ್ನನ್ನೊಂದೆಡೆ ಕರೆದೊಯ್ದ. ಅದೊಂದು ಊಹೆಗೂ ನಿಲುಕದ ವಿಚಿತ್ರ ಲೋಕ. 'ಇಲ್ಲಿ ಅಸಹ್ಯ, ಅನೈತಿಕ, ಅಸಿಂಧುವೆನ್ನುವುದು ಯಾವುದೂ ಇಲ್ಲ' ಎಂಬುದನ್ನು ಅಡಿಗಡಿಗೂ ಮುಖಕ್ಕೆ ರಾಚುವಂತೆ ತೋರಿಸುವ ಬೀದಿಗಳು. ಮನುಷ್ಯನ ಅಂತರಂಗ ಬಹಿರಂಗ ಎಲ್ಲವೂ ಒಂದೇ ಎಂಬುದನ್ನು ಸಾಬೀತುಪಡಿಸಲು ಪಟತೊಟ್ಟು ನಿಂತಿರುವ ಅನನ್ಯ ಎಲಿಮೆಂಟ್ಸ್‌ಗಳು. ಕಣ್ಣು ಕಿವಿ ಮೂಗು ಮುಚ್ಚಿ ನಡೆದರೂ; ಸ್ಪಷ್ಟವಾಗಿ ಗೋಚರಿಸುವ ಸೌಂದರ್ಯ ಸಂಕೇತಗಳು. ಕಿವಿಗಪ್ಪಳಿಸುವ ಸಂಗೀತ ವಾದ್ಯಗಳು, ಮೂಗಿನಿಂದ ನೇರ ಬ್ರಹ್ಮರಂಧ್ರದೊಳಹೊಕ್ಕು ಇಡೀ ದೇಹವನ್ನೇ ಪರವಶಗೊಳಿಸುವ ಸುಗಂಧಗಳಿಗೆ ಸೋಲದಿರಲು ಹೆಣಗುತ್ತಾ ನಾನು ಮೋ–ನನ್ನೇ ಹಿಂಬಾಲಿಸಿದೆ. ಆತ ಅಲ್ಲಿಯ ವಾತಾವರಣ ತನ್ನ ಮೇಲೆ ಯಾವುದೇ ಪರಿಣಾಮಗಳನ್ನೂ ಬೀರುತ್ತಿಲ್ಲ ಎಂಬುದು ಎದ್ದು ಕಾಣುವ ರೀತಿಯಲ್ಲಿ ನಡೆಯುತ್ತಾ ಬೀದಿಯ ನಡುವಿನ ಕಟ್ಟಡವೊಂದಕ್ಕೆ ನನ್ನನ್ನು ಕರೆದೊಯ್ದ. ಮಬ್ಬುಗತ್ತಲಿನ